ದಿನಾಂಕಃ 25.09.2025

ಅಸಲುದಾವೆ 79/2021

ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 1 ಬಿ ಪರ ವಕೀಲರಿಂದಃ

ಈ ದಾವೆಯಲ್ಲಿ ಕಾಲ ಕಾಲಕ್ಕೆ ಏನು ಪ್ರಕ್ರಿಯೆ ಆಗುತ್ತಿದ ಎಂಬುದನ್ನು ನೀವು ನಿಮ್ಮ ವಕೀಲರಿಂದ ಕೇಳಿ ತಿಳಿದುಕೊಳ್ಳುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಕಳೆದ ಬಾರಿ ಭಾಗಶಃ ಪಾಟಿ ಸವಾಲು ಆದ ನಂತರ ಏನೇನು ದಾಖಲಾತಿಗಳನ್ನು ಹಾಜರು ಪಡಿಸಲು ಕೇಳಿ ನೋಟೀಸ್ ಕೊಟ್ಟಿದ್ದಾರೆ ಎಂಬುದನ್ನು ನಿಮ್ಮ ವಕೀಲರು ನಿಮಗೆ ತಿಳಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೋಟೀಸಿನಲ್ಲಿ ಕೇಳಿರುವ ದಾಖಲಾತಿಗಳೆಲ್ಲವನ್ನು ನೀವು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಕೇಳಿದಂತಹ ದಾಖಲಾತಿಗಳನ್ನು ನೀವು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಿದ್ದೇವೆ ಎಂದು ಉತ್ತರಿಸುತ್ತಾರೆ.

2. ನಾನು ಪ್ರತಿವಾದಿಯರ ವಿರುದ್ಧ ಎ.ಸಿ ನ್ಯಾಯಾಲಯದಲ್ಲಿ ಆರ್.ಮಿಸ್ 420/2019 ದಾಖಲಿಸಿದ್ದೆನು ಎಂದರೆ ಸರಿ. ಸದರಿ ಅಪೀಲು ದಿಃ29.10.2024 ರಂದು ವಜಾ ಆಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಎ.ಸಿ ನ್ಯಾಯಾಲಯದ ಆದೇಶದ ನಕಲನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಪಡೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಆ ನಕಲನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈಗ ತೋರಿಸಿದ ದಾಖಲಾತಿ ಆರ್.ಮಿಸ್. 420/2019 ರಲ್ಲಿ ಎ.ಸಿ. ನ್ಯಾಯಾಲಯ ಮಾಡಿರುವ ಆದೇಶ ಎಂದರೆ ಸಾಕ್ಷಿ ಸದರಿ ದಾಖಲಾತಿಯಲ್ಲಿ ಇರುವ ತಮ್ಮ ಹೆಸರನ್ನು ನೋಡಿ ಗುರುತಿಸಿರುತ್ತಾರೆ, ಆದ್ದರಿಂದ ಸದರಿ ದಾಖಲಾತಿಯನ್ನು ನಿಡಿ1 ಎಂದು ಗುರುತಿಸಲಾಗಿರುತ್ತದೆ. ಸದರಿ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿಯಿಂದ ಭೂ ಸ್ವಾಧೀನಾವಾಗಿರುವ ಬಗ್ಗೆ ನಿಮಗೆ ಮಾಹಿತಿ ಇದೆ ಮತ್ತು ಆ ಬಾಬ್ತು ಕೆಲವು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿಯಿಂದ ಭೂ ಸ್ವಾಧೀನಾವಾಗಿರುವ ಬಾಬ್ತು ಪರಿಹಾರ ನಿರ್ಧರಿಸಲು ನಿಮ್ಮನೇನಾದರು ಕರೆದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿಯಿಂದ ಭೂ ಸ್ವಾಧೀನ ಪಡಿಸಿಕೊಳ್ಳಲು ಮಾಡಿದ ನೋಟೀಫಿಕೇಶನ್ ನಕಲಅನ್ನು ನೀವು ಮಂಡಳಿಯಿಂದ ತೆಗೆದುಕೊಂಡಿದ್ದೀರಾ ಎಂರದೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ನಕಲನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಮಂಡಳಿಯಿಂದ ಪಡೆದಿರುವ ಗೆಜೆಟ್ ನೋಟೀಫಿಕೇಶನ್ ಅನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ, ಹಾಜರು ಪಡಿಸುತ್ತೇನೆ. ಸದರಿ ನೋಟೀಫಿಕೇಶನ್ ಗೆ ನೀವೇನಾದರು ತಕರಾರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನೋಟಿಫಿಕೇಶನ್ ಬಂದ 15-20 ದಿನಗಳ ನಂತರ ತಕರಾರು ಕೊಟ್ಟಿದ್ದೇನೆ. ಭೂ ಸ್ವಾಧೀನ ನೋಟಿಫಿಕೇಶನ್ ಅಲ್ಲಿ ನಿಮ್ಮದಾಗಲಿ, ನಿಮ್ಮ ತಂದೆಯವದ್ದಾಗಲಿ ಹೆಸರಿತ್ತಾ ಎಂದರೆ ಸಾಕ್ಷಿ ಇತ್ತು ಎಂದು ಉತ್ತರಿಸುತ್ತಾರೆ. ಆ ಭೂ ಸ್ವಾಧೀನ ಪ್ರಕ್ರಿಯೇ ಯಾವ ವರ್ಷ ನಡೆದಿರುವುದು ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ, ಸುಮಾರು 8-10 ವರ್ಷಗಳಾಗಿವೆ ಎಂದು ಉತ್ತರಿಸುತ್ತಾರೆ. ಈಗ ತೋರಿಸಿದ ದಾಖಲಾತಿ ಭೂ ಸ್ವಾಧೀನ ಪ್ರಕ್ರಿಯೆ ನೋಟೀಸ್ ಎಂದು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಸದರಿ ದಾಖಲಾತಿಯನ್ನು ಓದಿ ನೋಡಿ ಹೌದು ಎಂದು ಒಪ್ಪಿರುತ್ತಾರೆ, ಆದ್ದರಿಂದ ಸದರಿ ದಾಖಲಾತಿಯನ್ನು ನಿಡಿ2 ಎಂದು ಗುರುತಿಸಲಾಗಿರುತ್ತದೆ (2 ಪುಟಗಳನ್ನು ಒಳಗೊಂಡು). ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿಯಿಂದ ಭೂ ಸ್ವಾಧೀನಾ ಪಾಡಿಸಿಕೊಳ್ಳಲು ಮಾಡಿರುವ ನೋಟೀಫಿಕೇಶನ್ ಸರಿಯಿಲ್ಲ ಎಂದು ಎಲ್ಲಿಯಾದರು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ನೋಟೀಫಿಕೇಶನ್ ಆಧಾರದ ಮೇಲೆ ದಾವ ಸರ್ವೆ ನಂ. ಜಮೀನಿನ ಭೂ ಸ್ವಾಧೀನದ ಬಾಬ್ತು ಪರಿಹಾರಿದ ಹಣವನುನ 1 ನೇ ಪ್ರತಿವಾದಿ ಸಿದ್ದೇಗೌಡರವರ ಕುಟುಂಬದವರು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

4. 1 ನೇ ಪ್ರತಿವಾದಿ ಸಿದ್ದೇಗೌಡರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಿದ್ದೇಗೌಡರ ತಂದೆಯ ಹೆಸರು ಬೋರೇಗೌಡ ಎಂದರೆ ಸರಿ. ಬೋರೇಗೌಡರ ಜೊತೆ ಹುಟ್ಟಿದವರು ಸಿದ್ದೇಗೌಡ, ಚೆನ್ನೇಗೌಡ, ಕರಿಗೌಡ ಮತ್ತು ಬಿ.ಲಿಂಗಯ್ಯ ಎಂದರೆ ಸರಿ. ಸಿದ್ದೇಗೌಡರ ಮಕ್ಕಳ ಪೈಕಿ ನಾಗರಾಜು ಮತ್ತು ಪದ್ಮ ಇದೇ ಸರ್ವೆ ನಂ. ಜಮೀನಿನ ಬಾಬ್ತು ತಲಾ 13 ಗುಂಟೆಯಂತೆ 2 ತಾಕು ನಂತರೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಸಿದ್ದೇಗೌಡರಿಗೆ ದಾವ ಸರ್ವೆ ನಂ.ಜಮೀನಿನಲ್ಲಿ ಒಟ್ಟು 4 ಎಕರೆ 24 ಗುಂಟೆ ಪೈಕಿ 1 ಎಕರೆ ಅವರಿಗೆ ಸೇರಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ನಿಮ್ಮ ಪ್ರಕಾರ ನಾಗರಾಜು ಅವರ ತಂದೆ ಮತ್ತು ಪದ್ಮರವರ ಮಾವ ಸಿದ್ದೇಗೌಡರಿಗೆ ಎಷ್ಟು ಜಮೀನು ಈ ಸರ್ವೆ ನಂ ನಲ್ಲಿ ಇತ್ತು ಎಂದರೆ ಸಾಕ್ಷಿ 1 ಎಕರೆ ಎಂದು ಉತ್ತರಿಸುತ್ತಾರೆ. ಚೆನ್ನೇಗೌಡರಿಗೆ ಎಷ್ಟಿತ್ತು ಎಂದರೆ ಸಾಕ್ಷಿ ಅವರಿಗೂ 1 ಎಕರೆ ಎಂದು ಉತ್ತರಿಸುತ್ತಾರೆ. ಸಿದ್ದೇಗೌಡರ ಇಸ್ಸೆ ಪೈಕಿ ಈ ಮೇಲೆ ಹೇಳಿದ ತಲಾ 13 ಗುಂಟೆ 2 ತಾಕು ಹೊರತು ಪಡಿಸಿ ಉಳಿದ ಜಮೀನು ಅವರ ಮೊಮ್ಮಗಳಾದ ಸುನಿತ ಅವರ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಿದ್ದೇಗೌಡರ ಜಮೀನು ಮತ್ತು ಚೆನ್ನೇಗೌಡರ ಜಮೀನು ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿ. ಇದೇ ಸರ್ವೆ ನಂ ನಲ್ಲಿ ಕರಿಗೌಡರಿಗೆ 1 ಎಕರೆ 14 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ 1 ಎಕರೆ 17 ಗುಂಟೆ ಎಂದು ಉತ್ತರಿಸುತ್ತಾರೆ. ಉಳಿಕೆ 1 ಎಕರೆ ಜಮೀನನ್ನು ವಿಭಾಗದಲ್ಲಿ 1 ನೇ ಪ್ರತಿವಾದಿ ಸಿದ್ದೇಗೌಡರ ತಂದೆ ಬೋರೇಗೌಡರ ಇಸ್ಸೆಗೆ ಬಿಡಲಾಗಿತ್ತು ಎಂದರೆ ಸಾಕ್ಷಿ ಇಲ್ಲ ಸುಳ್ಳು ಎಂದು ಉತ್ತರಿಸುತ್ತಾರೆ. ವಿಭಾಗದಲ್ಲಿ ದಾವ ಸರ್ವೆ ನಂ ನಲ್ಲಿ ಬಿ.ಲಿಂಗೇಗೌಡರಿಗೆ ಯಾವುದೇ ಭಾಗವನ್ನು ಕೊಟ್ಟಿರಲಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಬಿ.ಲಿಂಗೇಗೌಡರ ಕುಟುಂಬದವರ ಜೊತೆ ನನ್ನ ಬಾಂಧವ್ಯ ಚೆನ್ನಾಗಿದೆ. ಈ ಕೇಸಿನ ಬಗ್ಗೆ ಅವರ ಜೊತೆ ಮಾತನಾಡಿದ್ದಿರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

5. ದಾವ ಸರ್ವೆ ನಂ. ಬಾಬ್ತು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಯಾವುದಾದರು ಪ್ರಕರಣ ನಡೆದದ್ದು ಉಂಟಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ನ್ಯಾಯಾಲಯಕ್ಕೆ ಆರ್.ಟಿ.ಸಿಗಳನ್ನು ಹಾಜರು ಪಡಿಸಿದಾಗ ಅದರಲ್ಲಿ ಬರೆದಿರುವಂತಹ ವಿಚಾರಗಳನ್ನು ಓದಿ ತಿಳಿದುಕೊಂಡು ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದೇ ರೀತಿ ಆ ಆರ್.ಟಿ.ಸಿಗಳಲ್ಲಿ

ಬರೆದಿರುವ ನ್ಯಾಯಾಲಯಗಳ ಆದೇಶದ ನಕಲನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆರ್.ಟಿ.ಸಿಗಳಲ್ಲಿ ಉಲ್ಲೇಖಿಸಿರುವ ಬೇರೆ ನ್ಯಾಯಾಲಯದ ಆದೇಶದ ನಕಲನ್ನು ಈ ನ್ಯಾಯಾಲಯದಲ್ಲಿ ಹಾಜರು ಪಾಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಏನೂ ಇಲ್ಲ ಎಂದು ಉತ್ತರಿಸುತ್ತಾರೆ. ನೀವೇನಾದರು ಆರ್.ಟಿ.ಸಿಗಳಲ್ಲಿ ನಮೂದಿರು ನ್ಯಾಯಾಲಯದ ಆದೇಶಗಳು ಎಂದು ನಮೂದಾಗಿರುವುದು ಸರಿಯಿಲ್ಲ ಅದನ್ನು ತೆಗೆದುಹಾಕಿ ಅದನ್ನು ತಿದ್ದುಪಡಿ ಮಾಡಿಕೊಡಿ ಎಂದು ತಹಶಿಲ್ದಾರ್ ಅವರಿಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ3 ರ ಕಾಲಂ ನಂ.11 ರಲ್ಲಿ ಡಬ್ಲ್ಯೂ ಪಿ ನಂ.42007/2011 ಎಂದು ನಮೂದಿರು ಆದೇಶದ ನಕಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಕೆಂಪಮ್ಮ ಎನ್ನುವವರು ಕೇಸು ಹಾಕಿ ತಡೆ ಮಾಡಿಸಿದ್ದರು, ಕೈ ತಪ್ಪಿನಿಂದ ಆಗಿದೆ ಎಂದು ಹೇಳುತ್ತಾರೆ. ಹಾಗಾದರೆ ಕೇಸು ಹಾಕುವಾಗ ಈ ವಿಚಾರ ನಿಮಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ವಾದ ಪತ್ರದಲ್ಲಾಗಲಿ, ಸಾಕ್ಷ್ಯಾ ಪ್ರಮಾಣ ಪತ್ರದಲ್ಲಾಗಲಿ ಈ ಮೇಲೆ ಹೇಳಿದ ವಿಚಾರವನ್ನು ಬರೆಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ6 ರಲ್ಲಿ ಕಾಲಂ ನಂ.11 ರಲ್ಲಿ ಆರ್.ಆರ್.ಸಿ.ಆರ್. ನಂ.487/2019-20 ಎಂದು ನಮೂದಿದೆ ಅದರ ಆದೇಶದ ನಕಲನ್ನು ನೀವು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ತೆಗೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನೀವು ನ್ಯಾಯಾಲಯಕ್ಕೆ ಈ ದಾಖಲಾತಿ ಹಾಜರು ಪಡಿಸುವಾಗ ವಿಚಾರ ಗೊತ್ತಿತ್ತು ಅಲ್ಲವೇ ಎಂದರೆ ಸಾಕ್ಷಿ ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ಸದರಿ ವಿಚಾರವನ್ನು ನಿಮ್ಮ ವಾದ ಪತ್ರದಲ್ಲಾಗಲಿ, ಸಾಕ್ಷ್ಯಾ ಪ್ರಮಾಣ ಪತ್ರದಲ್ಲಾಗಲಿ ಬರೆಸಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಸಂಬಂಧಪಟ್ಟ ರೆವೆನ್ಯೂ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಮಗೆ ಅನುಕೂಲಕರವಾಗುವ ರೀತಿಯಲ್ಲಿ ದಾಖಲಾತಿಗಳನ್ನು ಮಾಡಿಸಿಕೊಳ್ಳುವು ಎಲ್ಲಾ ರೀತಿಯ ಕ್ಷಮತೆ ಇದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

6. ನಾನು ನ್ಯಾಯಾಲಯದ ಮುಂದೆ ಏನೇನು ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದು ತಿಳಿದುಕೊಂಡಿದ್ದೆನೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿಯಿಂದ ಭೂ ಸ್ವಾಧೀನ ಪಡಿಸಿಕೊಳ್ಳಲು ಮಾಡಿರುವ ನೋಟಿಫಿಕೇಶನ್‌ಗೆ ತಕರಾರು ಸಲ್ಲಿಸಿರುವುದಾಗಿ ಹೇಳಿದ್ದೀರಿ ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಬಹುದಾ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ

ಎಂದು ಉತ್ತರಿಸುತ್ತಾರೆ. ನಾನು ತಕರಾರನ್ನು ಈ ಕೇಸು ಶುರುವಾದ ನಂತರ ಕೊಟ್ಟಿದ್ದೇನೆ. ನೀವು ಆ ನೋಟೀಫಿಕೇಶನ್‌ಗೆ ಯಾವುದೇ ರೀತಿಯ ತಕರಾರನ್ನು ಕೊಡದೇ ಇದ್ದರು ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನಾವಾಗುತ್ತಿರುವ ಸ್ವತ್ತಿಗೂ ಮತ್ತು ನಿಮಗೂ ಯಾವುದೇ ಸಂಬಂಧ ಇಲ್ಲದೇ ಇರುವ ಕಾರಣ ನೀವು ಸದರಿ ನೋಟೀಫಿಕೆಶನ್‌ಗೆ ನೀವು ಯಾವುದೇ ತಕರಾರು ಸಲ್ಲಿಸಿಲ್ಲ ಎಂರದೆ ಸಾಕ್ಷಿ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ.

7. ಲಕ್ವೀರ್ ಸಿಂಗ್ ಎನ್ನುವವರು ಜಮೀನಿನ ಸರ್ವೆ ನಂ. ಆಗಲಿ, ವಿಸ್ತೀರ್ಣವಾಗಲಿ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಲಕ್ವೀರ್ ಸಿಂಗ್ ಎನ್ನುವವರು ಕೊಂಡು ಕೊಂಡ ಜಮೀನನು ನೀವು ನೊಡುವಂತಹ ಸಂಧರ್ಬ ಯಾವಾಗಾದರು ಬಂದಿದೆಯಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಲಕ್ವೀರ್ ಸಿಂಗ್ ಮತ್ತು ನಿಮ್ಮ ನಡುವೆ ಬಾಂಧವ್ಯ ಹೇಗಿದೆ ಎಂದರೆ ಸಾಕ್ಷಿ ನಾನು ಅವರನ್ನು ನೊಡೇ ಇಲ್ಲ ಎಂದು ಉತ್ತರಿಸುತ್ತಾರೆ. ಅವರ ಸ್ವತ್ತಿನ ಚೆಕ್ಕುಬಂದಿ ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಿದ್ದೇಗೌಡ ಬಿನ್ ಲೇಟ್ ಬೋರೇಗೌಡ ಎಂದರೆ ಈ ಕೇಸಿನ 1 ನೇ ಪ್ರತಿವಾದಿ ಎಂದರೆ ಸರಿ. ಭೂ ಸ್ವಾಧೀನ ನೋಟೀಫಿಕೇಶನ್ ನಲ್ಲಿ ಇರುವ 2 ನೇ ಹೆಸರೆ ಈ ದಾವೆಯ 1 ನೇ ಪ್ರತಿವಾದಿ ಸಿದ್ದೇಗೌಡ ಬಿನ್ ಲೇಟ್ ಬೋರೇಗೌಡ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಬಸವರಾಜ್ ಹೂಗಾರ್ ಬಾಳಪ್ಪ ರವರ ಜಮೀನು ಎಲ್ಲಿ ಬರುತ್ತಿದೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನೀವಾಗಲಿ ನಿಮ್ಮ ತಂದೆಯವರಾಗಲಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಎಂದೂ ಇರುವುದಿಲ್ಲ ಎಂದರೆ ಸಾಕ್ಷಿ ನಾವೇ ಇದ್ದೇವೆ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಯಾವತ್ತಾದರು ಬಿ.ಲಿಂಗೇಗೌಡರ ಮಾಲೀಕತ್ವದಲ್ಲಿ ಮತ್ತು ಸ್ವಾಧಿನದಲ್ಲಿ ಇತ್ತು ಎಂದು ತೋರಿಸುವ ಯಾವುದೇ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಆ ಬಗ್ಗೆ ಏನೂ ದಾಖಲಾತಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಅವರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ನೊಡಿದ ನಂತರ ವಕೀಲರ ಕೈಗೆ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಬಿ.ಲಿಂಗೇಗೌಡರ ಮಾಲೀಕತ್ವದಲ್ಲಿ ಇತ್ತು ಎಂದು ತೋರಿಸುವ ದಾಖಲಾತಿ ನಿಮ್ಮ ಬಳಿ ಇವೆಯಾ ಎಂದರೆ ಸಾಕ್ಷಿ ಇರುವುದು ಕಾಣೆ, ಲಾಯರ್ ಕೈಗೆ ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ.

8. ದಾವ ಸ್ವತ್ತಿನ ಮೇಲೆ ಚೆಸ್ಕಾಂ ಹೈ ಟೆಂಶನ್ ವಯರ್ ಹಾದು ಹೋಗಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದನ್ನು 2012–13 ರಲ್ಲಿ ಹಾಕಿದ್ದಾರೆ. ಸದರಿ ಹೈ ಟೆಂಶನ್ ಅಳವಡಿಸುವ ಕಾರ್ಯ ಸುಮಾರು ವರ್ಷಗಳು ನಡೆಯಿತು. ಸದರಿ ಹೈ ಟೆಂಶನ್ ವಯರ್ ಅಳವಡಿಸುವ ಮೊದಲು ಸಂಬಂಧಪಟ್ಟ ಭೂ ಮಾಲೀಕರಿಗೆ ಪರಿಹಾರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ಒಟ್ಟು ಎಷ್ಟು ಜಮೀನುಗಳಲ್ಲಿ ಹೈ ಟೆಂಶನ್ ವಯರ್ ಹಾದು ಹೋಗಿದೆ ಎಂದರೆ ಸಾಕ್ಷಿ ಬಹಳಷ್ಟು ಜಮೀನುಗಳಲ್ಲಿ ಹಾದು ಹೋಗಿದೆ ಅದೆಲ್ಲವನ್ನು ನಾವು ಬರೆದುಕೊಳ್ಳಲು ಆಗುವುದಿಲ್ಲ, ನಮ್ಮ ಜಮೀನನ್ನು ನೊಡಿಕೊಂಡು ಬರುತ್ತೇವೆ ಎಂದು ಉತ್ತರಿಸುತ್ತಾರೆ. ದಾವ ಸರ್ವೆ ನಂ. ಬಾಬ್ತು ಚೆಸ್ಕಾಂ ನವರಿಂದ ಪರಿಹಾರದ ಹಣವನ್ನು ಪ್ರತಿವಾದಿಯ ಕುಟುಬಂದವರು ಪಡೆದಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು ಪರಿಹಾರದ ಹಣದ ಬಾಬ್ತು ನೀವು ತಕರಾರು ಕೊಟ್ಟಿರುವ ಕುರಿತು ಯಾವುದಾದರು ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಕೇಸು ಹಾಕಿದ ಎಷ್ಟು ದಿನಗಳ ನಂತರ ಆ ತಕರಾರು ಕೊಟ್ಟಿದ್ದೀರಿ ಎಂದರೆ ಸಾಕ್ಷಿ 2015–16 ರಲ್ಲಿ ವಯರ್ ಹಾಕಿದ್ದು, ಕೇಸು ಹಾಕವ ಮುಂಚೆಯೆ ತಕರಾರು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಹೈ ಟೆಂಶನ್ ವಯರ್ ಹಾಕುವಾಗ ದಾವ ಸ್ವತ್ತಿನ ಖಾತೆ ಮತ್ತು ಕಂದಾಯ ಯಾರ ಹೆಸರಿನಲ್ಲಿ ಇದೆ ಎಂದು ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿ ಗೊತ್ತಾದ ನಂತರವೇ ಕೇಸು ಹಾಕಿದ್ದು ಎಂದು ಉತ್ತರಿಸುತ್ತಾರೆ. ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 2015–16 ರಲ್ಲಿ ಎಂದು ಉತ್ತರಿಸುತ್ತಾರೆ. ಬಿ.ಲಿಂಗೇಗೌಡರ ಕುಟುಂಬಕ್ಕೂ ಮತ್ತು ಸಿದ್ದೇಗೌಡರ ತಂದೆ ಬೋರೆಗೌಡರು ಬದುಕಿದ್ದಾಗ ಸುಮಾರು 45–50 ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸಾಕ್ಷಿ ಮಾತುಕತೆ ಇತ್ತು ಎಂದು ಉತ್ತರಿಸುತ್ತಾರೆ. ನನ್ನ ತಂದೆ ಹಾಗು ಬಿ.ಲಿಂಗೇಗೌಡರು ಆತ್ಮಿಯರೂ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿಯ ತಂದೆ ಬೋರೆಗೌಡರಿಗೆ ಮತ್ತು ಬಿ.ಲಿಂಗೇಗೌಡರಿಗೆ ದ್ವೇಷ ಇದ್ದುದ್ದರಿಂದ ಹೇಗಾದರು ಮಾಡಿ ದಾವ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಿಮ್ಮ ತಂದೆ ಮತ್ತು ಬಿ.ಲಿಂಗೇಗೌಡರು ಸೇರಿ ನಾಮಕಾವಸ್ಥೆ ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂರದೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಾಡಿಸಿರುವ ನಿಪಿ1 ರಂತೆ ಕ್ರಯ ಪತ್ರವನ್ನು ಬರೆದುಕೊಡಲು ಬಿ.ಲಿಂಗೇಗೌಡರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಇದೆ, ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಇಂದಿಗೂ

ದಾವ ಸ್ವತ್ತು ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿ ನಮ್ಮ ಸ್ವಾಧೀನದಲ್ಲಿ ಇದೆ ಎಂದು ಉತ್ತರಿಸುತ್ತಾರೆ. ನಿಮಗೂ, ದಾವ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ದಾವ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ಸೃಷ್ಟಿತ ಸುಳ್ಳು ದಾಖಲಾತಿಗಳಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.